ಪುಣೆಯ ಶನಿವಾರವಾಡ ಇತಿಹಾಸದ ವೈಭವದ ನೆನಪಿನ ತಂಪನ್ನೂ ವರ್ತಮಾನದ ನಿರ್ಲಕ್ಷ್ಯದ ಬಿಸಿಲನ್ನೂ ಒಟ್ಟೊಟ್ಟಿಗೇ ಹೊತ್ತುಕೊಂಡು ನಿಂತಿರುವ ಕಟ್ಟಡ. ಬೆಂಕಿ ಅವಘಡಕ್ಕೆ ಸಿಲುಕಿ, ಉರಿದುಳಿದ ಇದರ ಭಾಗಗಳು ಹೇಳುವ ಕಥೆಗಳನ್ನು ಕೇಳಿಸಿಕೊಳ್ಳುವುದೇ ಒಂದು ರೋಮಾಂಚನಕಾರಿ ಅನುಭವ.



# ಶನಿವಾರವಾಡವ ಭಾನುವಾರ ನೋಡಹೋದೆ...

■ ಆರ್ಕೆ ಆಡುಕಳ

ಕೆಲಸದ ಮೇಲೆ ಪುಣೆಗೆ ಹೋದವನಿಗೆ ಭಾನುವಾರ ಕಳೆಯುವುದು ಹೇಗೆ ಎಂಬುದೇ ಯೋಚನೆಯಾಗಿತ್ತು. ಆಗಲೇ ನೆನಪಿಗೆ ಬಂದಿದ್ದು ಶನಿವಾರವಾಡ. ಲಘುಬಗೆಯಲ್ಲಿ ತಯಾರಾಗಿ, ಟ್ಯಾಕ್ಸಿ ಹಿಡಿದು ಅಲ್ಲಿಗೆ ತಲುಪಿದಾಗ ಮಧ್ಯಾಹ್ನದ 11 ಗಂಟೆ. ಪುಣೆಯ ಬಿಸಿಲು ಆಗಲೇ ನೆತ್ತಿಯ ಮೇಲಿತ್ತು. ಟ್ಯಾಕ್ಸಿಯಿಂದ ಇಳಿದವನಿಗೆ ಕಣ್ಣಮುಂದೆಯೇ ಕಾಣಿಸಿದ್ದು ಹಳೆಯ ಕಾಲದ ಒಂದು ದೊಡ್ಡ ಕೋಟೆ. 'ಭಾಜಿರಾವೋ ಮಸ್ತಾನಿ' ಸಿನಿಮಾದಲ್ಲಿ ಇದನ್ನು ತೋರಿಸಿದ್ದನ್ನು ನೋಡಿದ್ದೇ, ಅದರ ವೈಭವ ನೆನಪಿಗೆ ಬಂತು.

ಅಂದು ರವಿವಾರವಾಗಿದ್ದರಿಂದ ಆಗಲೇ ಜನರಿಂದ ತುಂಬಿತ್ತು. ಟಿಕೆಟಿಗಾಗಿ ಕ್ಯೂನಲ್ಲಿ ನಿಂತವನಿಗೆ ಎತ್ತರಕ್ಕೆ ಕಾಣಿಸಿದ್ದು ಈ ಕೋಟೆಯ ಮುಖ್ಯದ್ವಾರ. ಇದು ಸುಮಾರು 21 ಅಡಿ ಎತ್ತರ ಹಾಗೂ 14 ಅಡಿ ಅಗಲವಾಗಿದ್ದು, ಬಾಗಿಲುಗಳು ಕಬ್ಬಿಣದ ಹೊದಿಕೆಯನ್ನು ಹೊಂದಿವೆ. ಬಾಗಿಲುಗಳ ಮೇಲಿರುವ ಚೂಪಾದ (ಈಟಿಯ ಮೊನೆಯಂತಿರುವ) ಕಬ್ಬಿಣದ ಮೊನೆಗಳು ನನ್ನ ಗಮನ ಸೆಳೆದವು. ಕೋಟೆಯ ರಕ್ಷಣೆಗಾಗಿ ಮಾಡಿರುವ ಈ ಬಾಗಿಲುಗಳು ದೈತ್ಯಾಕಾರವಾಗಿದ್ದು ಬೆರಗುಗೊಳಿಸುವಂತಿವೆ. ಈ ಬಾಗಿಲು ಉತ್ತರಕ್ಕೆ (ಡೆಲ್ಲಿಯ ಕಡೆಗೆ) ಮುಖ ಮಾಡಿರುವುದರಿಂದಾಗಿ ಅದನ್ನು 'ಡೆಲ್ಲಿ ದರ್ವಾಜಾ' ಎಂದು ಕರೆಯುತ್ತಾರೆ. ₹25 ಪ್ರವೇಶ ಶುಲ್ಕ ಕೊಟ್ಟು ಒಳಗಡಿಯಿಟ್ಟೆ.

## ಪೇಶ್ವೆಗಳ ನಂಟು

ಈ ಕೋಟೆಯ ಬಗ್ಗೆ ಇತಿಹಾಸ ಹೀಗೆ ಹೇಳುತ್ತದೆ; ಶನಿವಾರವಾಡ ಕಟ್ಟಿಸಿದ್ದು ಒಂದನೇ ಪೇಶ್ವೆ ಬಾಜಿರಾವ್. ಇವರು ಮರಾಠಾ ಛತ್ರಪತಿ ಸಾಹು ಮಹಾರಾಜರು ನೇಮಿಸಿದ ಪ್ರಧಾನಮಂತ್ರಿಗಳು. ಕುದುರೆಯ ಮೇಲೆ ಕುಳಿತ ಪೇಶ್ವೆ ಬಾಜಿರಾವ್ ಅವರ ಪ್ರತಿಮೆಯನ್ನು ಕೋಟೆಯ ಮುಂಭಾಗದಲ್ಲಿ ಕಾಣಬಹುದು. ಕಟ್ಟಡದ ಕೆಲಸಕ್ಕೆ ಅಡಿಗಲ್ಲು ಹಾಕಿದ್ದು 1732ರ ಒಂದು ಶನಿವಾರದಂದು. ಹಾಗಾಗಿ ಶನಿವಾರವಾಡ ಎಂದು ಹೆಸರು ಬಂದಿರುವುದು.

ಏಳು ಅಂತಸ್ತಿನ ಈ ಕಟ್ಟಡವನ್ನು ಎರಡು ವರ್ಷಗಳ ಅವಧಿಯಲ್ಲಿ ಕಟ್ಟಿ ಮುಗಿಸಲಾಯಿತಂತೆ. ಮೊದಲು ಇದನ್ನು ಕಲ್ಲಿನಿಂದಲೇ ಕಟ್ಟಲು ಶುರು ಮಾಡಿದ್ದರು. ಆದರೆ ರಾಜಧಾನಿಯ ಜನರಿಂದ ಬಂದ ದೂರಿನ ಆಧಾರದ ಮೇಲೆ ಉಳಿದ ಭಾಗವನ್ನು ಇಟ್ಟಿಗೆಯಿಂದ ಕಟ್ಟಿದರು. ಆಗಿನ ಕಾಲದಲ್ಲಿ, ಮಹಾರಾಜರುಗಳು ಮಾತ್ರ ತಮ್ಮ ಅರಮನೆಯನ್ನು ಕಲ್ಲಿನಿಂದ ಕಟ್ಟಬಹುದಾಗಿತ್ತು; ಪೇಶ್ವೆಗಳು ಕಟ್ಟುವಂತಿರಲಿಲ್ಲ. ಸುಮಾರು 90 ವರ್ಷಗಳ ಕಾಲ ಈ ಅರಮನೆಯನ್ನು ಪೇಶ್ವೆ ಮನೆತನದವರು ಅನುಭವಿಸಿದರು. 1818ರಲ್ಲಿ, ಎರಡನೇ ಪೇಶ್ವೆ ಬಾಜಿರಾವ್ ಮತ್ತು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಜೊತೆಗಿನ ಯುದ್ಧದಲ್ಲಿ ಪೇಶ್ವೆಗಳು ಸೋಲನ್ನನುಭವಿಸಿದ ಮೇಲೆ ಈ ಕೋಟೆ



ಬ್ರಿಟಿಷರ ಪಾಲಾಯಿತು. 1828ರ ಫೆ. 27ರಂದು ಆಕಸ್ಮಿಕವಾಗಿ ಉಂಟಾದ ಬೆಂಕಿಯ ಅವಘಡದಲ್ಲಿ ಕಟ್ಟಡವು ಭಸ್ಮವಾಗಿ, ಕೆಳಗಿನ ಕಲ್ಲಿನ ಭಾಗ ಮಾತ್ರ ಉಳಿದುಕೊಂಡಿದೆ.

## ನೋಡಿದಷ್ಟೂ ಬೆರಗು

ಮುಖ್ಯದ್ವಾರದಿಂದ ಒಳಗಡಿಯಿಡುತ್ತಿದ್ದಂತೆ ವಿಶಾಲವಾದ ಅಂಗಣ ತೆರೆದುಕೊಳ್ಳುತ್ತದೆ. ಎಡ–ಬಲ, ಎರಡೂ ಬದಿಗಳಿಂದ ಮೇಲಿನ ಮಹಡಿಗೆ ಹತ್ತಲು ಮೆಟ್ಟಿಲುಗಳಿವೆ. ಆ ಮೆಟ್ಟಿಲುಗಳ ಮೂಲಕ